**೪ (೧) (ಬಿ) (vii): ಆಡಳಿತ ವ್ಯವಸ್ಥೆಯಲ್ಲಿ ಸಲಹೆ/ಸೂಚನೆ ನೀಡಲು ರಚಿಸಲಾಗಿರುವ ಸಮಿತಿಗಳು ಹಾಗೂ ಸಮಿತಿಯ ಸಭೆಗಳಿಗೆ, ಸಾರ್ವಜನಿಕ ಪ್ರವೇಶ ಅಥವಾ ಸಭೆಯ ನಡುವಳಿಗಳು ಸಾರ್ವಜನಿಕ ಪ್ರವೇಶ ಅಥವಾ ಸಭೆಯ ನಡುವಳಿಗಳು ಸಾರ್ವಜನಿಕರಿಗೆ ಮುಕ್ತವಾಗಿಯೆ ?**

ಪರಿನಿಯಮಗಳನ್ನು ರೂಪಿಸುವ ಮತ್ತು ಅನೇಕ ತೀರ್ಮಾನಗಳನ್ನು ಕೈಗೊಳ್ಳುವ ಸಿಂಡಿಕೇಟ್‌ನಲ್ಲಿ ರಾಜ್ಯ ಸರ್ಕಾರದ ಶಿಫಾರಸಿನ ಮೇರೆಗೆ ಕುಲಾಧಿಪತಿಗಳಿಂದ ನಾಮನಿರ್ದೇಶನ ಹೊಂದಿದ ಆರು ಜನ ಖ್ಯಾತ ಶಿಕ್ಷಣ ತಜ್ಞರು ಇರುತ್ತಾರೆ. ಅವರಲ್ಲಿ,

೧. ಅನುಸೂಚಿತ ಜಾತಿ ಅಥವಾ ಅನುಸೂಚಿತ ಪಂಗಡಗಳಿಗೆ ಸೇರಿದ ಒಬ್ಬರು;
೨. ಇತರ ಹಿಂದುಳಿದ ವರ್ಗಗಳಿಗೆ ಸೇರಿದ ಒಬ್ಬರು;
೩. ಮಹಿಳೆಯರು ಒಬ್ಬರು;
೪. ಧಾರ್ಮಿಕ ಅಲ್ಪಸಂಖ್ಯಾತರಿಗೆ ಸೇರಿದ ಒಬ್ಬರು;
೫. ಇತರ ಇಬ್ಬರು; ಇರುತ್ತಾರೆ.

ವಿದ್ಯಾವಿಷಯಕ ಪರಿಷತ್ತು ವಿಶ್ವವಿದ್ಯಾಲಯದ ಅಧೀನದಲ್ಲಿ ಬರುವ ಪ್ರತಿ ಜಿಲ್ಲೆಯಿಂದ ಕರ್ನಾಟಕ ವಿಧಾನ ಸಭೆಯಿಂದ ಆರಿಸಲ್ಪಟ್ಟ ಒಬ್ಬೊಬ್ಬ ವಿಧಾನ ಸಭಾ ಸದಸ್ಯರನ್ನು ಮತ್ತು ಕರ್ನಾಟಕ ವಿಧಾನ ಪರಿಷತ್ತಿನಿಂದ ಆರಿಸಲ್ಪಟ್ಟ ಇಬ್ಬರು ವಿಧಾನ ಪರಿಷತ್ ಸದಸ್ಯರನ್ನು ಮತ್ತು ರಾಜ್ಯ ಸರ್ಕಾರದಿಂದ ನಾಮನಿರ್ದೇಶಿತರಾದ ಕೈಗಾರಿಕೆ, ವಾಣಿಜ್ಯ, ಬ್ಯಾಂಕಿಂಗ್ ಅಥವಾ ಇತರ ಯಾವುದೇ ವೃತ್ತಿಯನ್ನು (ವಿಶ್ವವಿದ್ಯಾನಿಲಯದ ಅಧಿಕಾರ ವ್ಯಾಪ್ತಿಯೊಳಗೆ ಬರುವ) ಪ್ರತಿನಿಧಿಸುವ ಮೂವರು ಸುಪ್ರಸಿದ್ಧ ವ್ಯಕ್ತಿಗಳನ್ನು ಹೊಂದಿರುತ್ತದೆ.